


## ಕಟ್ಟಾ ಕನ್ನಡಾಭಿಮಾನ!

ಮಗಳು ಇತ್ತೀಚೆಗೆ ಫೋನ್ ಮಾಡಿದಾಗ, 'ನೀನು ಈ ಬಾರಿ ಬೆಂಗಳೂರಿಗೆ ಬಂದಾಗ ಕನ್ನಡಾಭಿಮಾನದ ದರ್ಶಿನಿಯೊಂದಕ್ಕೆ ಕರೆದುಕೊಂಡು ಹೋಗುವೆ. ಅಲ್ಲಿ ಕನ್ನಡದ ಫಲಕಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ಹೆಸರುಗಳು ಇವೆ' ಎಂದಿದ್ದಳು. ನಾನೂ ಆದಷ್ಟು ಬೇಗ ಅಲ್ಲಿಗೆ ಒಮ್ಮೆ ಭೇಟಿಕೊಡುವ ಕಾತರದಲ್ಲಿದ್ದೆ. ಅಂತೆಯೇ ಮೊನ್ನೆ ಬೆಂಗಳೂರಿಗೆ ಹೋದಾಗ ಎನ್.ಆರ್. ಕಾಲೋನಿಯಲ್ಲಿರುವ ಆ ದರ್ಶಿನಿಗೆ ನನ್ನನ್ನು ಕರೆದುಕೊಂಡು ಹೋದಳು. ಅಲ್ಲಿನ ಕನ್ನಡದ ಫಲಕಗಳನ್ನು ನೋಡಿ, ಅವರ ಕನ್ನಡಾಭಿಮಾನಕ್ಕೆ ಮನಸೋತೆ. ತಿಂಡಿ ಮುಗಿಸಿ ಹೊರಗೆ ಬಂದ ಬಳಿಕ ಯಾವುದಕ್ಕೂ ಮಿತ್ರರಿಗೆ ಈ ಬಗ್ಗೆ ತಿಳಿಸುವ ಎಂದು ದರ್ಶಿನಿಯ ಹೆಸರು ನೋಡಿದೆ, 'ಸೌತ್ ಕಿಚನ್' ಎಂದಿತ್ತು!

**ನಗರ ಗುರುದೇವ್ ಭಂಡಾರ್ಕರ್**

## ಯಾರ್ರೀ ಅವಳು?

ಹೆಂಡತಿ ತವರಿಗೆ ಹೋಗಿದ್ದಳು. ಎರಡು ದಿನಗಳಾದರೂ ಒಂದು ಫೋನ್ ಕೂಡ ಮಾಡಲಿಲ್ಲ. ಕೊನೆಗೆ ನಾನೇ ಫೋನ್ ಮಾಡಿದರೂ ಫೋನ್ ಎತ್ತಲಿಲ್ಲ. ಮೂರನೇ ದಿನವೂ ಫೋನ್ ಮಾಡಲಿಲ್ಲ. ನನಗೂ ಸಿಟ್ಟು ಬಂತು, ಹಾಗೇ ಅವಳನ್ನು ತುಸು ರೇಗಿಸಬೇಕೆಂದು, 'ಹುಡುಗಿಯೊಬ್ಬಳು ನನ್ನ ವಿಳಾಸ ಕೇಳಿ ಮೆಸೇಜ್ ಕಳಿಸಿದ್ದಾಳೆ. ನಮ್ಮ ಮನೆ ಡೋರ್ ನಂಬರ್ ಅಳಿಸಿ ಹೋಗಿದೆ, ಮನೆಯ ನಂಬರ್ ಎಷ್ಟು ಅಂತ ನಿನಗೆ ನೆನಪಿದೆಯೇ?' ಅಂತ ಮೆಸೇಜ್ ಕಳುಹಿಸಿ, ಫೋನ್ ಮ್ಯೂಟ್ ಮಾಡಿ ಸ್ನೇಹಿತರ ಜೊತೆ ರಾತ್ರಿ ಊಟಕ್ಕೆ ಹೋದೆ. ಮನೆಗೆ ಬಂದು ಫೋನ್ ನೋಡಿದಾಗ ಹೆಂಡತಿಯ ಐವತ್ತೊಂಬತ್ತು ಮಿಸ್ಡ್ ಕಾಲ್ ಇದ್ದವು. ಒಳ್ಳೆ ಶಾಸ್ತಿ ಆಯಿತು ಎಂದು ಸುಮ್ಮನೇ ಮಲಗಿದೆ. ಮರುದಿನ ಆಫೀಸಿಗೆಂದು ಹೊರಟು ನಿಂತಾಗ ಮನೆಯಾಚೆ ಆಟೊ ನಿಂತ ಸದ್ದು ಕೇಳಿಸಿತು. ಹೊರಗೆ ಬಂದು ನೋಡಿದರೆ ತವರಿನಿಂದ ವಾಪಸ್ಸಾದ ಹೆಂಡತಿಯಿಂದ, 'ಯಾರ್ರಿ ಅವಳು?' ಎಂಬ ಪ್ರಶ್ನೆ ಒಳಗಡಿ ಇಡುವ ಮೊದಲೇ ತೂರಿ ಬಂತು!



**ಭೋಜರಾಜ ಸೊಪ್ಪಿಮಠ**